



ವೇಳೆಯನ್ನು ಕಳೆಯಲು ಹಲವಾರು ದಾರಿಗಳಿವೆ. ಆದರೆ, 21ನೇ ಶತಮಾನದ ತಂತ್ರಜ್ಞಾನ ಕ್ರಾಂತಿ ಹವ್ಯಾಸತನದ ನೂರಾರು ದಾರಿಗಳನ್ನು ಮುಚ್ಚಿಬಿಟ್ಟಿದೆ. ಟೀವಿ, ವಾಟ್ಸಾಪ್, ಫೇಸ್‌ಬುಕ್ ತರಹದ ಸಾಮಾಜಿಕ ಮಾಧ್ಯಮಗಳು ಮನುಜನ ಸ್ವಾಭಾವಿಕ ಸೃಜನಶೀಲತೆಯ ಒಳಕಣ್ಣುಗಳಿಗೆ ಪೊರೆ ಹಾಕಿವೆ.

ಸಂಸಾರದ ಜಂಜಡ ಹಾಗೂ ಆಧುನಿಕ ತಂತ್ರಜ್ಞಾನದ ಆಮಿಷಗಳ ನಡುವೆಯೂ ಸೃಜನಶೀಲತೆಯ ಕತ್ತು ಹಿಸುಕದೇ, ಸಮರ್ಥವಾಗಿ ಬಳಸಿಕೊಂಡ ಉದಾಹರಣೆಗಳೂ ಇವೆ. ಮನೆಯಲ್ಲೇ ಬೆಳೆಯುವ ತರಕಾರಿಗಳ, ಕಳೆ ಬೀಜಗಳನ್ನು ಉಪಯೋಗಿಸಿಕೊಂಡು ಅದ್ಭುತ ಕಲಾಕೃತಿಗಳನ್ನು ರಚಿಸುತ್ತಿರುವ ಜ್ಯೋತಿ ಮಹೇಶ್ ಇದಕ್ಕೊಂದು ಜ್ವಲಂತ ಉದಾಹರಣೆ. ಇವರ ಪ್ರತಿಯೊಂದು ಬೀಜ ಕಲಾಕೃತಿಯೂ ಒಂದೊಂದು ಅದ್ಭುತ.

ಹಾಲುಗುಂಬಳ, ಭತ್ತ, ಕಹಿಹಿಂಡ್ಲೆ, ಸೌತೆ, ಹೀರೆ ಹೀಗೆ ಹತ್ತು ಹಲವು ಜಾತಿಯ ಬೀಜಗಳನ್ನು ಸಂಗ್ರಹಿಸಿ, ಅವುಗಳನ್ನು ತೊಳೆದು, ಒಣಗಿಸಿ, ಉಪಚರಿಸಿ, ಸಾಕಷ್ಟು ಸಮಯ, ಶ್ರಮ ಹಾಕಿ ಕಲಾಕೃತಿಗಳು ತಯಾರಾಗುತ್ತವೆ. ಬೀಜಗಳು ಜಾರಿ ಹೋಗದಂತೆ ಮಾಡಲು, ಫೆವಿಕಾಲ್ ಅಂಟನ್ನು ಬಳಸಲಾಗುತ್ತದೆ. ಅತ್ಯಂತ ತಾಳ್ಮೆ ಬೇಡುವ ಕಲಾಕೃತಿಗಳು ಕಲಾಕಾರನ ಸಂಯಮವನ್ನು ಒರೆಗೆ ಹಚ್ಚುತ್ತವೆ. ಒಂದೊಂದು ಕಲಾಕೃತಿ ರಚನೆಯಾಗಲು ನೂರಾರು ಗಂಟೆಗಳು ಬೇಕಾಗುತ್ತವೆ.

ಬೆಲೆ ಕಟ್ಟಲಾಗದ ಈ ರೀತಿಯ ಕಲಾಕೃತಿಗಳಿಂದ ಮತ್ತೊಂದು ಬಹುದೊಡ್ಡ ಪ್ರಯೋಜನವೆಂದರೆ, ಮಲೆನಾಡಿನ ಸಸ್ಯವೈವಿಧ್ಯದ ಪರಿಚಯ. ನಿಗದಿತ ಗಿಡದ ಸಂಪೂರ್ಣ ಮಾಹಿತಿ ಬೀಜ ಸಂಗ್ರಹಿಸುವವರಿಗೆ ಇರುತ್ತದೆ. ಮತ್ತು ಕಲಾಕೃತಿಯನ್ನು ನೋಡಿ ಮೆಚ್ಚಿಕೊಳ್ಳುವವರಿಗೂ ಈ ಮಾಹಿತಿ ಲಭ್ಯವಾಗುತ್ತದೆ. ಇದರಿಂದ ಅಳಿದುಹೋಗುತ್ತಿರುವ ಅಥವಾ ಅಳಿದುಹೋಗಲಿರುವ ಸಸ್ಯವೈವಿಧ್ಯವನ್ನು ಉಳಿಸುವ ಕೆಲಸವೂ ಆಗುತ್ತದೆ. ಮಲೆನಾಡಿನ ಅಪರೂಪದ ಸಸ್ಯವೈವಿಧ್ಯದ ಮೌಲ್ಯವರ್ಧನೆಯನ್ನು ಹೀಗೂ ಮಾಡಬಹುದು ಎಂಬುದಕ್ಕೆ ಇದೊಂದು ಉದಾಹರಣೆ.

ಐಷಾರಾಮಿ ಮದುವೆಗಳಲ್ಲಿ ಅಥವಾ ಇನ್ನಿತರ ಸಮಾರಂಭಗಳಲ್ಲಿ ಬಳಸಲು ಅಥವಾ ಯಾರಿಗಾದರೂ ಅತ್ಯಪರೂಪದ ಉಡುಗೊರೆ ನೀಡಲು ಇಂತಹ ಕಲಾಕೃತಿಗಳನ್ನು ಬಳಸಿಕೊಳ್ಳಬಹುದು. ■

